# ಹೊಸತು

## ಹುವಾಯ್ P8



ಸ್ಮಾರ್ಟ್‌ಫೋನ್ ತಯಾರಿಕೆಗೆ ಪ್ರಸಿದ್ಧವಾದ ಹುವಾಯ್ ಎಲೆಕ್ಟ್ರಾನಿಕ್ಸ್ ಇದೀಗ P8 ಮಾದರಿ ಸ್ಮಾರ್ಟ್‌ಫೋನ್ ಹೊರತಂದಿದೆ.

5.2 ಇಂಚಿನ ತೆರೆ, 3 ಜಿಬಿ ರ್‍ಯಾಮ್, 16 ಜಿಬಿ ಮೆಮೊರಿ ಸೌಲಭ್ಯ ಇದರಲ್ಲಿದೆ. 13 ಮೆಗಾಪಿಕ್ಸೆಲ್ ಕ್ಯಾಮೆರಾ, ಎಲ್‌ಇಡಿ ಫ್ಲಾಶ್ ಮತ್ತು 8 ಮೆಗಾಪಿಕ್ಸೆಲ್ ಸೆಲ್ಫಿ ಜೊತೆಗೆ 2680 ಎಂಎಎಚ್ ಬ್ಯಾಟರಿ, ಉತ್ತಮ ಗ್ರಾಫಿಕ್ಸ್, ಗೇಮ್ಸ್ ಇದರ ವಿಶೇಷ.

ತೆಳ್ಳಗೆ ಮತ್ತು ಹಗುರವಾದ ವಿನ್ಯಾಸ ಇದು ಹೊಂದಿದ್ದು, ಆನ್‌ಲೈನ್‌ನಲ್ಲೂ ಲಭ್ಯ.

ವಿವರಗಳಿಗೆ: www.huawei.com/in




## ವಾಗ್ ಬಕ್ರಿ ಐಸ್ ಟೀ

ಚಹಾಪ್ರಿಯರು ಇಷ್ಟಪಡುವ ಲೆಮನ್, ಆರೆಂಜ್ ಮತ್ತು ಪೀಚ್‌ನ ಆಹ್ಲಾದಕರ ಸ್ವಾದಗಳಲ್ಲಿ ವಾಗ್ ಬಕ್ರಿ ಐಸ್ ಟೀ ಪರಿಚಯಿಸಿದೆ.

ಎಲ್ಲ ವಯೋಮಾನದವರೂ ಇಷ್ಟಪಡುವ ಸ್ವಾದ ಈ ಚಹಾಗಳಲ್ಲಿದ್ದು, ನಿಮ್ಮನ್ನು ತಂಪಾಗಿರಿಸುತ್ತದೆ ಎಂದು ಕಂಪೆನಿ ಹೇಳಿದೆ. ಸಾಂಪ್ರದಾಯಿಕ ರೀತಿಯಲ್ಲಿ ಸಂಸ್ಕರಿಸಿದ ಚಹಾ ಇದಾಗಿದ್ದು, ತಾಜಾ ಹಾಗೂ ಗುಣಮಟ್ಟದಿಂದ ಕೂಡಿರುತ್ತದೆ. 25 ಗ್ರಾಂನ ಪ್ಯಾಕ್ ಬೆಲೆ 10 ರೂಪಾಯಿ.

ಮಾಹಿತಿಗೆ: 09819977344 www.waghbakritea.com

## ಫಿಲಿಪ್ಸ್ ಆ್ಯಂಬಿಲೈಟ್ ಟಿವಿ



ಎಲೆಕ್ಟ್ರಾನಿಕ್ಸ್ ಉತ್ಪನ್ನಗಳಿಗೆ ಪ್ರಸಿದ್ಧವಾದ ಫಿಲಿಪ್ಸ್ ಇದೀಗ ಆ್ಯಂಬಿಲೈಟ್ 4K ಅಲ್ಟ್ರಾ ಹೆಚ್‌ಡಿ ಸ್ಮಾರ್ಟ್ ಎಲ್‌ಇಡಿ ಟಿವಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಸ್ಮಾರ್ಟ್‌ಆ್ಯಪ್ ಮತ್ತು ಸೋಷಿಯಲ್ ನೆಟ್‌ವರ್ಕಿಂಗ್ ಸಂಪರ್ಕ ಇದರಲ್ಲಿದೆ. ಉತ್ತಮ ಗುಣಮಟ್ಟದ ಟಿವಿ ವೀಕ್ಷಣೆಯ ಅನುಭವವನ್ನು ಈ ಟಿವಿ ನೀಡುತ್ತದೆ ಎಂದು ಕಂಪೆನಿ ಹೇಳಿದೆ. ಆ್ಯಂಬಿಲೈಟ್ ತಂತ್ರಜ್ಞಾನದಿಂದಾಗಿ ಕಣ್ಣುಗಳಿಗೆ ಆಯಾಸವಾಗುವುದಿಲ್ಲ. 50 ಇಂಚಿನ ತೆರೆ ಮಾದರಿಯ ಬೆಲೆ 1,55,000 ರೂಪಾಯಿಗಳು. ಮಾಹಿತಿಗೆ: 9845706155 www.philips.co.in



## ಓರ್ರಾ ಆಭರಣ

ಸಾಂಪ್ರದಾಯಿಕ ಮತ್ತು ಆಧುನಿಕ ವಿನ್ಯಾಸದ ಆಭರಣಗಳಿಗೆ ಪ್ರಸಿದ್ಧವಾದ ಓರ್ರಾ ಇದೀಗ ರಾಜಮಹಲ್ ಮತ್ತು ವೈಟ್ ಲಿಲ್ಲೀ ಸಂಗ್ರಹವನ್ನು ಪರಿಚಯಿಸಿದೆ.

ವಜ್ರ ಮತ್ತು ಪ್ಲಾಟಿನಮ್‌ನಿಂದ ಕೂಡಿರುವ ಈ ಸಂಗ್ರಹದಲ್ಲಿ ಬಳೆ, ಉಂಗುರ, ಪದಕ, ನೆಕ್ಲೆಸ್ ಮತ್ತು ಕಿವಿಯೋಲೆಗಳ ಆಕರ್ಷಕ ವಿನ್ಯಾಸದ ಆಯ್ಕೆಗಳಿವೆ. ಹಗುರ ತೂಕದ ಇವು ಧರಿಸಲು ಕೂಡಾ ಆರಾಮದಾಯಕ ಮತ್ತು ಎಲ್ಲ ವಯೋಮಾನದ ಮಹಿಳೆಯರು ಇಷ್ಟಪಡುವ ಆಭರಣ ಎಂದು ಕಂಪೆನಿ ಹೇಳಿದೆ. ಮಾಹಿತಿಗೆ: 9342483454

## ಲೆನೊವೊ A7000

ಲ್ಯಾಪ್‌ಟಾಪ್ ಮತ್ತು ಸ್ಮಾರ್ಟ್‌ಫೋನ್ ತಯಾರಿಕ ಸಂಸ್ಥೆ ಲೆನೊವೊ ಇದೀಗ ತನ್ನ ಸ್ಮಾರ್ಟ್‌ಫೋನ್ ಸರಣಿಯಲ್ಲಿ A7000 ಮಾದರಿಯನ್ನು ಬಿಡುಗಡೆ ಮಾಡಿದೆ. 2 ಜಿಬಿ ರ್‍ಯಾಮ್, 5.5 ಇಂಚಿನ ತೆರೆ, ಡಾಲ್ಬಿ ಡಿಜಿಟಲ್ ಸ್ಪೀಕರ್ ಇದರಲ್ಲಿದೆ.

8 ಮೆಗಾಪಿಕ್ಸೆಲ್ ಕ್ಯಾಮೆರಾ ಮತ್ತು 5 ಮೆಗಾಪಿಕ್ಸೆಲ್ ಸೆಲ್ಫಿ ಇದರ ವಿಶೇಷ.

2900 ಎಂಎಎಚ್ ಬ್ಯಾಟರಿ, ಹಗುರ ಮತ್ತು ತೆಳುವಾದ ವಿನ್ಯಾಸ ಇದು ಹೊಂದಿದೆ. ಬೆಲೆ 8,999 ರೂಪಾಯಿ. ಆನ್‌ಲೈನ್‌ನಲ್ಲಿ ಲಭ್ಯ.

ಮಾಹಿತಿಗೆ: 9980719634



## ಲೋಟಸ್ ಐಲೈನರ್

ಸೌಂದರ್ಯವರ್ಧಕ ಉತ್ಪನ್ನಗಳಿಗೆ ಹೆಸರಾಂತ ಲೋಟಸ್ ಮಹಿಳೆಯರ ಮೇಕಪ್ ಕಿಟ್‌ನಲ್ಲಿರಬೇಕಾದ ಕಲರ್ ಕಿಕ್ ಐಲೈನರ್ ಹೊರತಂದಿದೆ.

ಕಣ್ಣು ಮತ್ತು ಮುಖದ ಅಂದವನ್ನು ಹೆಚ್ಚಿಸಲು ಇದು ಸಹಕಾರಿ, ಸುಲಭವಾಗಿ ಬಳಸಬಹುದಾಗಿದ್ದು, ನೀರಿನಿಂದ ಹಾಳಾಗುವುದಿಲ್ಲ. ಗಾಢ ಬಣ್ಣ ಬಹುಕಾಲದವರೆಗೆ ತಾಜಾ ಆಗಿ ಉಳಿಯುತ್ತದೆ.

ಇದನ್ನು ಸಸ್ಯಜನ್ಯ ಮೂಲಗಳಿಂದ ನೈಸರ್ಗಿಕವಾಗಿ ತಯಾರಿಸಿದ್ದು, ಯಾವುದೇ ರಾಸಾಯನಿಕ ಬಳಸಿಲ್ಲ, ಇದರಿಂದ ಯಾವುದೇ ಅಡ್ಡ ಪರಿಣಾಮವಿಲ್ಲ ಎಂದು ಕಂಪೆನಿ ಹೇಳಿದೆ. ಕಣ್ಣಿನ ಆರೋಗ್ಯಕ್ಕೂ ಇದು ಉತ್ತಮ.

ಬೆಲೆ 725 ರೂಪಾಯಿಗಳು.

ಮಾಹಿತಿಗೆ: 9342483454

